# ಸೇತುಬಂಧ ಸಾಫಲ್ಯ ಪರೀಕ್ಷೆ 2026-27

## ವಿಷಯ: ಕನ್ನಡ ತರಗತಿ: 6ನೇ ಅಂಕಗಳು: 10 ಸಮಯ: 45 ನಿ

ವಿದ್ಯಾರ್ಥಿಯ ಹೆಸರು: ___________________________________ ಹಾಜರಾತಿ ಸಂಖ್ಯೆ: ___________

---

**ಪ್ರಶ್ನೆ 1. ಕೆಳಗಿನ ಪ್ಯಾರಾವನ್ನು ಗಮನವಿಟ್ಟು ಓದಿ, ಕೊಟ್ಟಿರುವ ಪ್ರಶ್ನೆಗೆ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ:**

"ನಮ್ಮ ದೇಶದಲ್ಲಿ ಹರಿಯುವ ನದಿಗಳು ಕೇವಲ ನೀರಿನ ಮೂಲಗಳಲ್ಲ, ಅವು ನಮ್ಮ ಸಂಸ್ಕೃತಿಯ ಜೀವನಾಡಿಗಳಾಗಿವೆ. ನದಿಗಳ ನೀರು ಕೃಷಿಗೆ, ಕುಡಿಯಲು ಮತ್ತು ವಿದ್ಯುತ್ ಉತ್ಪಾದನೆಗೆ ಅತ್ಯಗತ್ಯವಾಗಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಕಾರ್ಖಾನೆಗಳ ತ್ಯಾಜ್ಯ ಮತ್ತು ಪ್ಲಾಸ್ಟಿಕ್‌ನಿಂದಾಗಿ ನದಿಗಳು ಕಲುಷಿತಗೊಳ್ಳುತ್ತಿದ್ದು, ಅವುಗಳನ್ನು ಸ್ವಚ್ಛವಾಗಿಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ."

**ಪ್ರಶ್ನೆ: ಪ್ರಸ್ತುತ ದಿನಗಳಲ್ಲಿ ನದಿಗಳು ಕಲುಷಿತಗೊಳ್ಳಲು (ಹಾಳಾಗಲು) ಪ್ರಮುಖ ಕಾರಣವೇನು?**

ಅ) ಕೃಷಿ ಚಟುವಟಿಕೆಗಳು ಮತ್ತು ಕುಡಿಯುವ ನೀರು ಬಳಕೆ ಆ) ಅತಿಯಾದ ಮಳೆ ಮತ್ತು ಪ್ರವಾಹಗಳು

ಇ) ಕಾರ್ಖಾನೆಗಳ ತ್ಯಾಜ್ಯ ಮತ್ತು ಪ್ಲಾಸ್ಟಿಕ್‌ನ ಬಳಕೆ ಈ) ಅತಿಯಾಗಿ ವಿದ್ಯುತ್ ಉತ್ಪಾದನೆ ಮಾಡುವುದು

ಉತ್ತರ___________________________________________________________

**ಪ್ರಶ್ನೆ 2. ಕೆಳಗಿನ ಪ್ಯಾರಾವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ನಿಖರವಾದ ಉತ್ತರ ಬರೆಯಿರಿ.**

"ಮೀನಾ ತನ್ನ ಗೆಳೆಯರೊಂದಿಗೆ ಶಾಲಾ ಪ್ರವಾಸಕ್ಕೆ ಹಂಪೆಗೆ ಹೋಗಿದ್ದಳು. ಅಲ್ಲಿ ಅವಳು ಕಲ್ಲಿನ ರಥ ಮತ್ತು ಸುಂದರವಾದ ವಿರೂಪಾಕ್ಷ ದೇವಸ್ಥಾನವನ್ನು ಕಂಡು ರೋಮಾಂಚನಗೊಂಡು, ತನ್ನ ಡೈರಿಯಲ್ಲಿ ಎಲ್ಲವನ್ನೂ ಬರೆದುಕೊಂಡಳು."

ಅ) ಮೀನಾ ತನ್ನ ಗೆಳೆಯರೊಂದಿಗೆ ಎಲ್ಲಿಗೆ ಪ್ರವಾಸ ಹೋಗಿದ್ದಳು?

ಉತ್ತರ:______________________________________________________________________

ಬ) ಹಂಪೆಯಲ್ಲಿ ಮೀನಾ ಏನನ್ನು ಕಂಡು ರೋಮಾಂಚನಗೊಂಡಳು?

ಉತ್ತರ:______________________________________________________________________

**ಪ್ರಶ್ನೆ 3. 'ನನಗೆ ಇಷ್ಟವಾದ ಹಬ್ಬ' ಅಥವಾ 'ನನ್ನ ಸಾಕು ಪ್ರಾಣಿ' ಎಂಬ ವಿಷಯದ ಕುರಿತು 3 ರಿಂದ 4 ಸರಳ ವಾಕ್ಯಗಳನ್ನು ಸ್ವಂತವಾಗಿ ಬರೆಯಿರಿ.**

__________________________________________________________________________

__________________________________________________________________________

__________________________________________________________________________

__________________________________________________________________________

__________________________________________________________________________

__________________________________________________________________________

**ಪ್ರಶ್ನೆ 4. ನೀನು ಶಾಲೆಯ ಗ್ರಂಥಾಲಯಕ್ಕೆ ಹೋಗಿ ಕಥೆ ಪುಸ್ತಕವನ್ನು ಪಡಕೊಳ್ಳಬೇಕಾಗಿದೆ. ಅಲ್ಲಿನ ಶಿಕ್ಷಕರ ಹತ್ತಿರ ನೀನು ನಡೆಸುವ ದಿನನಿತ್ಯದ ಮೌಖಿಕ ಸಂಭಾಷಣೆಯನ್ನು 3 ಸಾಲುಗಳಲ್ಲಿ ಬರೆಯಿರಿ.**

__________________________________________________________________________

________________________________________________________________________
________________________________________________________________________
________________________________________________________________________
________________________________________________________________________

**ಪ್ರಶ್ನೆ 5: ಚಿತ್ರವನ್ನು ನೋಡಿ ಪ್ರಶ್ನೆಗಳಿಗೆ  ನಿಮ್ಮ ಸ್ವಂತ ಮಾತುಗಳಲ್ಲಿ ವಿವರವಾಗಿ ಹೇಳಿ/ಬರೆಯಿರಿ.**



ಅ) ಇದರಲ್ಲಿರುವ ಪ್ರಮುಖ ಪಾತ್ರಗಳು ಯಾವುವು?

_____________________________________

ಬ) ಇಲ್ಲಿ ಯಾವ ಘಟನೆ ನಡೆಯುತ್ತಿದೆ?

_____________________________________

_____________________________________

_____________________________________________________________________

**ಪ್ರಶ್ನೆ 6. ನಿಮ್ಮ ದೈನಂದಿನ ಅನುಭವದ ಆಧಾರದಲ್ಲಿ, ನಿಮ್ಮ ಶಾಲೆಯಲ್ಲಿ ಅಥವಾ ಮನೆಯಲ್ಲಿ ಆಹಾರ ಮತ್ತು ನೀರನ್ನು ವ್ಯರ್ಥ ಮಾಡದಂತೆ ತಡೆಯಲು ನೀನು ಮಾಡಬಹುದಾದ 3 ಸರಳ ಕೆಲಸಗಳನ್ನು ಬರೆಯಿರಿ.**

________________________________________________________________________
________________________________________________________________________
________________________________________________________________________
________________________________________________________________________
________________________________________________________________________

**ಪ್ರಶ್ನೆ 7.ಕೆಳಗಿನ ಸಾಲುಗಳನ್ನು ಪೂರ್ಣವಿರಾಮ, ಅಲ್ಪವಿರಾಮ ಹಾಗೂ ಭಾವಸೂಚಕಗಳನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ಧ್ವನಿ, ಏರಿಳಿತ ಮತ್ತು ನಿಲುಗಡೆಯೊಂದಿಗೆ ಓದಿ ತೋರಿಸು.**

"ಆಹಾ! ಎಷ್ಟು ಸುಂದರವಾಗಿದೆ ಈ ನವಿಲಿನ ನೃತ್ಯ! ಅಣ್ಣಾ, ನೀನು ಎಂದಾದರೂ ನವಿಲು ಗರಿ ಬಿಚ್ಚಿ ಆಡುವುದನ್ನು ನೋಡಿದ್ದೀಯಾ? ಒಮ್ಮೆ ಇಲ್ಲಿ ಬಂದು ನೋಡು!"

**ಪ್ರಶ್ನೆ 8. ಕೆಳಗಿನ ಪ್ರಚಾರ ಕರಪತ್ರದ (Notice) ವಿವರವನ್ನು ಓದಿ, ಕೊಟ್ಟಿರುವ ಪ್ರಶ್ನೆಗೆ ಉತ್ತರಿಸಿ.**




ಅ) ಈ ಕರಪತ್ರದಲ್ಲಿ ಯಾವ ಉಚಿತ ವಸ್ತುವಿನ ವಿತರಣೆಯ ಬಗ್ಗೆ ತಿಳಿಸಲಾಗಿದೆ

_____________________________________________________
_____________________________________________________

ಆ) ಈ ಕಾರ್ಯಕ್ರಮವು ಯಾವ ಸ್ಥಳದಲ್ಲಿ ಮತ್ತು ಯಾವ ದಿನದಂದು ನಡೆಯುತ್ತದೆ?

ಉತ್ತರ: _____________________________________________________________

________________________________________________________________________

**ಪ್ರಶ್ನೆ 9. ನೀಡಲಾದ ಅಪೂರ್ಣ ಕಥೆಯನ್ನು ನಿಮ್ಮ ಆಲೋಚನೆ ಮತ್ತು ಸೃಜನಾತ್ಮಕತೆಯನ್ನು ಬಳಸಿ ಸ್ವಂತ ವಾಕ್ಯಗಳಿಂದ ಪೂರ್ಣಗೊಳಿಸಿ.**

" ಒಂದು ಕಾಡಿನಲ್ಲಿ ಮೊಲ ಮತ್ತು ಆಮೆ ವಾಸವಾಗಿದ್ದವು, ಮೊಲಕ್ಕೆ ತನ್ನ ವೇಗದ ಬಗ್ಗೆ ತುಂಬಾ ಅಹಂಕಾರವಿತ್ತು. ಒಂದು ದಿನ ಮೊಲವು ಆಮೆಯ ನಿಧಾನ ನಡಿಗೆಯನ್ನು ನೋಡಿ ಹೀಯಾಳಿಸಿ, ಓಟದ ಸ್ಪರ್ಧೆಗೆ ಆಹ್ವಾನಿಸಿತು.ಆಮೆಯು ಶಾಂತವಾಗಿ ಒಪ್ಪಿಕೊಂಡಿತು ಮತ್ತು ಕಾಡಿನ ಪ್ರಾಣಿಗಳ ಸಮ್ಮುಖದಲ್ಲಿ ಸ್ಪರ್ಧೆಯು ಆರಂಭವಾಯಿತು.ಸ್ಪರ್ಧೆ ಆರಂಭವಾದ ತಕ್ಷಣ ಮೊಲವು ತುಂಬಾ ವೇಗವಾಗಿ ಓಡಿ ಗುರಿಯ ಹತ್ತಿರ ತಲುಪಿತು.ಹಿಂದೆ ತಿರುಗಿ ನೋಡಿದಾಗ ಆಮೆ ಎಲ್ಲೂ ಕಾಣಿಸದಿದ್ದಾಗ, ಮೊಲವು ಮರದ ನೆರಳಿನಲ್ಲಿ ಸ್ವಲ್ಪ ಹೊತ್ತು ಮಲಗಲು ನಿರ್ಧರಿಸಿತು..."

________________________________________________________________

________________________________________________________________

________________________________________________________________

________________________________________________________________

________________________________________________________________

________________________________________________________________

(ನಿಮ್ಮ ಕಲ್ಪನೆ ಬಳಸಿ ಈ ಕಥೆಯನ್ನು ಕನಿಷ್ಠ 3 ವಾಕ್ಯಗಳಲ್ಲಿ ಪೂರ್ಣಗೊಳಿಸಿ.)

**ಪ್ರಶ್ನೆ 10. ನೀನು ಶಾಲಾ ಗ್ರಂಥಾಲಯದಲ್ಲಿ ಅಥವಾ ಮನೆಯಲ್ಲಿ ಯಾವುದಾದರೂ ಒಬ್ಬ ದೇಶಭಕ್ತರ (ಉದಾಹರಣೆಗೆ: ಸ್ವಾಮಿ ವಿವೇಕಾನಂದ, ಸಂಗೊಳ್ಳಿ ರಾಯಣ್ಣ, ಕಿತ್ತೂರು ಚೆನ್ನಮ್ಮ ಅಥವಾ ಸುಭಾಷ್ ಚಂದ್ರ ಬೋಸ್) ಕಥೆ ಅಥವಾ ಪುಸ್ತಕ ಓದಿರುತ್ತೀಯಾ. ಆ ಪುಸ್ತಕದಲ್ಲಿ ನಿನಗೆ ಇಷ್ಟವಾದ ಒಂದು ಪ್ರಮುಖ ಗುಣ/ವಿಚಾರವನ್ನು ಬರೆದು, ಅದನ್ನು ನಿನ್ನ ಇಂದಿನ ಜೀವನದಲ್ಲಿ ಹೇಗೆ ಬಳಸಿಕೊಳ್ಳುತ್ತೀಯಾ ಎಂದು ಬರೆ.**

________________________________________________________________

________________________________________________________________

________________________________________________________________

________________________________________________________________

________________________________________________________________

________________________________________________________________

________________________________________________________________

________________________________________________________________

________________________________________________________________

# ಸೇತುಬಂಧ ಸಾಫಲ್ಯ ಪರೀಕ್ಷೆ 2026-27 ಉತ್ತರ ಪತ್ರಿಕೆ

**ವಿಷಯ: ಕನ್ನಡ** **ತರಗತಿ: 6ನೇ**

ಪ್ರಶ್ನೆ 1. ಕಾರ್ಖಾನೆಗಳ ತ್ಯಾಜ್ಯ ಮತ್ತು ಪ್ಲಾಸ್ಟಿಕ್‌ನ ಬಳಕೆ

ಪ್ರಶ್ನೆ 2. ಅ) ಉತ್ತರ:** ಮೀನಾ ತನ್ನ ಗೆಳೆಯರೊಂದಿಗೆ **ಹಂಪೆಗೆ** ಪ್ರವಾಸ ಹೋಗಿದ್ದಳು.

ಬ) ಉತ್ತರ:** ಹಂಪೆಯಲ್ಲಿ ಮೀನಾ **ಕಲ್ಲಿನ ರಥ ಮತ್ತು ಸುಂದರವಾದ ವಿರೂಪಾಕ್ಷ ದೇವಸ್ಥಾನವನ್ನು** ಕಂಡು ರೋಮಾಂಚನಗೊಂಡಳು.

ಪ್ರಶ್ನೆ 3.'ನನಗೆ ಇಷ್ಟವಾದ ಹಬ್ಬ' -ನನಗೆ ದೀಪಾವಳಿ ಹಬ್ಬ ಎಂದರೆ ತುಂಬಾ ಇಷ್ಟ. ಈ ಹಬ್ಬದಲ್ಲಿ ನಾವು ಮನೆಯ ತುಂಬಾ ದೀಪಗಳನ್ನು ಹಚ್ಚುತ್ತೇವೆ. ಹೊಸ ಬಟ್ಟೆ ಧರಿಸಿ ಸಿಹಿ ತಿಂಡಿಗಳನ್ನು ತಿನ್ನುತ್ತೇವೆ.

'ನನ್ನ ಸಾಕು ಪ್ರಾಣಿ' -ನಮ್ಮ ಮನೆಯಲ್ಲಿ ಒಂದು ಮುದ್ದಾದ ನಾಯಿಮರಿ ಇದೆ. ಅದರ ಹೆಸರು ಟಾಮಿ. ಅದು

ಪ್ರಶ್ನೆ 4. ವಿದ್ಯಾರ್ಥಿ::- ನಮಸ್ತೆ ಗುರೂಜಿ, ನನಗೆ ಓದಲು ಒಂದು ಒಳ್ಳೆಯ ನೀತಿ ಕಥೆಯ ಪುಸ್ತಕ ಬೇಕಿತ್ತು.

ಶಿಕ್ಷಕರು:-ಹೌದಾ ತಮ್ಮಾ, ಗ್ರಂಥಾಲಯದ ಮೂರನೇ ಕಪಾಟಿನಲ್ಲಿ ಪಂಚತಂತ್ರದ ಕಥೆ ಪುಸ್ತಕಗಳಿವೆ ನೋಡು. ವಿದ್ಯಾರ್ಥಿ:- ಧನ್ಯವಾದಗಳು ಗುರೂಜಿ, ನಾನು ಓದಿದ ನಂತರ ಮುಂದಿನ ವಾರ ಇದನ್ನು ಮರಳಿ ತಂದುಕೊಡುತ್ತೇನೆ.

ಪ್ರಶ್ನೆ 5. ಈ ಚಿತ್ರವು 'ಪ್ರಾಮಾಣಿಕ ಕಟ್ಟಿಗೆ ಕಡಿಯುವವನ' ಕಥೆಗೆ ಸಂಬಂಧಿಸಿದ್ದಾಗಿದೆ. ಇದರಲ್ಲಿ ಬಡ ಕಟ್ಟಿಗೆ ಕಡಿಯುವವನ ಕೊಡಲಿ ನದಿಗೆ ಬಿದ್ದಾಗ ಅವನು ಅಳುತ್ತಿರುತ್ತಾನೆ. ಅವನ ದುಃಖ ಕಂಡು ನದಿಯಿಂದ ಪ್ರತ್ಯಕ್ಷಳಾದ ಜಲದೇವತೆಯು ಅವನಿಗೆ ಸಹಾಯ ಮಾಡಲು ಕೊಡಲಿಯನ್ನು ಹಿಡಿದು ತರುತ್ತಿದ್ದಾಳೆ.

ಪ್ರಶ್ನೆ 6 , 1) ಊಟ ಮಾಡುವಾಗ ತಟ್ಟೆಯಲ್ಲಿ ತುತ್ತೂ ಅನ್ನವನ್ನೂ ವ್ಯರ್ಥ ಮಾಡದೆ ಪೂರ್ತಿಯಾಗಿ ತಿನ್ನುತ್ತೇನೆ.

2) ಕುಡಿಯುವ ನೀರನ್ನು ತಂಬಿಗೆಯಲ್ಲಿ ಅಳತೆಯಾಗಿ ತಗೆದುಕೊಂಡು ಪೋಲು ಮಾಡುವುದಿಲ್ಲ.

3) ಶಾಲೆಯ ನಲ್ಲಿಯನ್ನು ಯಾರಾದರೂ ತೆರೆದು ಬಿಟ್ಟಿದ್ದರೆ ತಕ್ಷಣ ಹೋಗಿ ಬಂದ್ ಮಾಡುತ್ತೇನೆ.

ಪ್ರಶ್ನೆ 7. ವಿದ್ಯಾರ್ಥಿಯ ಮೌಖಿಕ ಓದಿನ ನಿರರ್ಗಳತೆಯನ್ನು ಪರಿಶೀಲನೆ.

ಪ್ರಶ್ನೆ 8. ಈ ಕರಪತ್ರದಲ್ಲಿ ಉಚಿತ **ಸಸಿಗಳ (ಗಿಡಗಳ)** ವಿತರಣೆಯ ಬಗ್ಗೆ ತಿಳಿಸಲಾಗಿದೆ.

ಆ) ಈ ಕಾರ್ಯಕ್ರಮವು **ಚೆಂಡಿಯಾದ ಗ್ರಾಮ ಪಂಚಾಯತ್ ಆವರಣದಲ್ಲಿ ಜೂನ್ 5 ರಂದು** ನಡೆಯುತ್ತದೆ.

ಪ್ರಶ್ನೆ 9..ತಂಪಾದ ಗಾಳಿಗೆ ಮೊಲವು ಗಾಢ ನಿದ್ರೆಗೆ ಜಾರಿತು, ಆದರೆ ಆಮೆಯು ವಿಶ್ರಮಿಸದೆ ನಿರಂತರವಾಗಿ ಸಾಗಿತು.ಆಮೆಯು ನಿದ್ರಿಸುತ್ತಿದ್ದ ಮೊಲವನ್ನು ದಾಟಿ, ನಿಧಾನವಾಗಿ ತನ್ನ ಗುರಿಯನ್ನು

ತಲುಪಿ ಸ್ಪರ್ಧೆಯಲ್ಲಿ ಗೆದ್ದಿತು. ನಿದ್ರೆಯಿಂದ ಎಚ್ಚರಗೊಂಡು ಓಡಿದ ಮೊಲಕ್ಕೆ ಆಗಲೇ ಆಮೆ ಗೆದ್ದಿರುವುದು ಕಂಡು ತನ್ನ ಅಹಂಕಾರದ ಬಗ್ಗೆ ನಾಚಿಕೆಯಾಯಿತು..

ಪ್ರಶ್ನೆ 10. ನಾನು ಗ್ರಂಥಾಲಯದಲ್ಲಿ **ಕಿತ್ತೂರು ರಾಣಿ ಚೆನ್ನಮ್ಮನ** ಕಥೆ ಓದಿದ್ದೆ. ದೇಶಕ್ಕಾಗಿ ಅವರು ಬ್ರಿಟಿಷರ ವಿರುದ್ಧ ತೋರಿದ ಅಪ್ರತಿಮ 'ಧೈರ್ಯ'ದ ಗುಣ ನನಗೆ ತುಂಬಾ ಇಷ್ಟವಾಯಿತು.

**ಜೀವನದಲ್ಲಿ ಅನ್ವಯ:** ನನ್ನ ಇಂದಿನ ಜೀವನದಲ್ಲಿ ನಾನು ಯಾವುದೇ ಕಷ್ಟದ ಸಂದರ್ಭ ಎದುರಾದರೂ ಅಥವಾ ಪರೀಕ್ಷೆಯ ಭಯ ಕಾಡಿದರೂ ಹೆದರದೆ ಧೈರ್ಯವಾಗಿ ಎದುರಿಸಲು ಈ ಪುಸ್ತಕದ ಜ್ಞಾನ ನನಗೆ ಸಹಾಯ ಮಾಡುತ್ತದೆ. ತರಗತಿಯಲ್ಲಿ ಎಲ್ಲರ ಮುಂದೆ ಮಾತನಾಡಲು ಧೈರ್ಯ ತಂದುಕೊಡುತ್ತದೆ.